# ಆರ್ಯಸಮಾಜದ ಹೊರೆ, ಬರೆ

ಈ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳು ಸಮಾಜದ ಹಸಿ ಸತ್ಯಗಳನ್ನು ಬಿಚ್ಚಿ ತೋರಿಸುತ್ತಿವೆ. ಪತ್ರಿಕೆ, ಟಿವಿಗಳಲ್ಲಿ ಪ್ರಸಾರವಾಗಲಾರದ ಹಲವು ನಿಷೇಧಿತ ವಿಷಯ/ದೃಶ್ಯಗಳು ಜನರಿಗೆ ಲಭ್ಯವಾಗುತ್ತಿವೆ. ಪ್ರಜ್ಞಾವಂತರನೇಕರು ಮನುಷ್ಯಪರ ಆಲೋಚನೆಗಳನ್ನು ಪ್ರತಿಕ್ರಿಯೆಯ ಮೂಲಕ ತೇಲಿಬಿಡುವುದು ಮತ್ತು ಕಿಡಿಗೇಡಿಗಳು ತಮ್ಮ ಜೀವವಿರೋಧೀ ತೆವಲುಗಳನ್ನು ಹರಿಯಬಿಡುವುದು ಅಲ್ಲಿಯೆ. ಒಟ್ಟಿನಲ್ಲಿ ಪ್ರತಿಯೊಬ್ಬರೂ ತಮ್ಮ ಅಭಿವ್ಯಕ್ತಿ ಮಾರ್ಗವನ್ನು ಈಗ ಕಂಡುಕೊಂಡಿದ್ದಾರೆ. ಮೊಬೈಲೆಂಬ ಮುಷ್ಟಿಬಂಧ ಚುಳುಕುಯಂತ್ರ ಕಲ್ಯಾಣಮಿತ್ರನೂ ಹೌದು, ಧೂರ್ತ ಸ್ನೇಹಿತನೂ ಹೌದು.

ಒಂದು ಹೃದಯವಿದ್ರಾವಕವಾದ ದೃಶ್ಯ ಇತ್ತೀಚೆಗೆ ವಾಟ್ಸಾಪ್‌ನಲ್ಲಿ ಹರಿದಾಡುತ್ತಿತ್ತು. ಅದು ರೈಲಿನಲ್ಲಿ ರಾಸುಗಳನ್ನು ಸಾಗಿಸುತ್ತಿದ್ದ ಎಂಬ ಕಾರಣಕ್ಕೆ ಒಬ್ಬ ವ್ಯಕ್ತಿಯನ್ನು ನಿಲ್ದಾಣದಲ್ಲಿ ಹೊರಕ್ಕೆ ಎಳೆದು ಏಳೆಂಟು ಮಂದಿ ಪುಂಡರು ಹಿಗ್ಗಾ ಮುಗ್ಗಾ ಥಳಿಸುತ್ತಿದ್ದ ದೃಶ್ಯ. ಆತ ದಾಖಲೆಗಳ ಸಮೇತ ರಾಸುಗಳನ್ನು ಮಾರಾಟಕ್ಕಾಗಿ ಸಾಗಿಸುತ್ತಿದ್ದ. ಅವುಗಳು ಕಸಾಯಿಖಾನೆಗಲ್ಲವೆಂದೂ, ಮಾರಾಟಕ್ಕಾಗಿಯೆಂದೂ ಪರಿಪರಿಯಾಗಿ ಬೇಡಿಕೊಳ್ಳುತ್ತಿದ್ದರೂ ಮೇಲಿಂದಮೇಲೆ ಹೊಡೆತಗಳು ಬೀಳುತ್ತಲೇ ಇದ್ದವು. ಒಬ್ಬರಾದಮೇಲೆ ಒಬ್ಬರು ಒದೆತಗಳನ್ನು ನೀಡುತ್ತಲೇ ಇದ್ದರು. ಅವನ ಸಹಾಯಕ್ಕೆಂದು ಬಂದ ರೈಲಿನ ಚಾಲಕನೂ ಸಹ ಪುಂಡರ ಥಳಿತಕ್ಕೆ ಗುರಿಯಾಗಬೇಕಾಯಿತು.

ಅತಿಥಿಗಾಗಿ ಗೋವನ್ನು ಕಡಿಯುವ ಕಾಲವೊಂದಿತ್ತು (ಗೋಘ್ನ). ಗೋಹತ್ಯೆ ಮಹಾ ಪಾಪ ಎನ್ನುವ ಕಾಲದಲ್ಲಿ ಈಗ ನಾವಿದ್ದೇವೆ (ಮಹಾ ಚಕ್ರೀಯ ಉರುಳು)! ಗೋಹತ್ಯೆ/ರಕ್ಷಣೆಯ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳಲು ರಾಜ್ಯಗಳಿಗೆ ಸಂವಿಧಾನದ 48ನೆಯ ಪರಿಚ್ಛೇದ ಅವಕಾಶಮಾಡಿಕೊಟ್ಟಿದೆ ಕೂಡ. ಕೆಲವು ರಾಜ್ಯಗಳು ಈಗಾಗಲೇ ಶಾಸನಗಳನ್ನು ರಚಿಸಿ ಆದೇಶಗಳನ್ನು ಹೊರಡಿಸಿವೆ. ಮನುಷ್ಯನ ವಿರುದ್ಧ ಎಸಗುವ ಅಪರಾಧಗಳಿಗಿಂತಲೂ ಘನಘೋರವಾದದ್ದು ಪಶುವಿನ ಮೇಲೆ ಎಸಗುವ ಅಪರಾಧ ಎಂದು ಶಿಕ್ಷೆಯ ಸ್ವರೂಪಗಳು ಬಿಂಬಿಸುತ್ತಿವೆ. ಅವು ಲಘುಹಾಸ್ಯವಾಗಿಯೂ ವಾಟ್ಸಾಪ್‌ಗೆ ಆಹಾರವಾಗುತ್ತಿವೆ.

ಗೋರಕ್ಷಣೆಯ ವಿಚಾರ ಇಂದು ನಿನ್ನೆಯದಲ್ಲ. ಹಿಂದೂ ಧರ್ಮದ ಪುನರ್ ವ್ಯಾಖ್ಯಾನದ ಪ್ರಕ್ರಿಯೆಯಲ್ಲಿ ಸ್ತ್ರೀ ಮತ್ತು ಗೋವು ಹೊಸ ರೂಪಕಾರ್ಥಗಳನ್ನು ಪಡೆದು ಹಿಂದೂಗಳ ಭಾವ ಭಿತ್ತಿಯೊಳಗೆ ಪವಿತ್ರ ಸ್ಥಾನ ಗಳಿಸಿಕೊಳ್ಳಲು ಯತ್ನಿಸುತ್ತಿರುವುದೂ ಹೊಸತಲ್ಲ. 'ಸತಿ' ಪದ್ಧತಿಯ ವಿರುದ್ಧ ಬ್ರಹ್ಮಸಮಾಜ ಹೋರಾಡಿದ ಹಾಗೆಯೆ ಗೋರಕ್ಷಣೆಗೆ ಆರ್ಯಸಮಾಜ ಟೊಂಕ ಕಟ್ಟಿ ನಿಂತಿತು. ಆರ್ಯಸಮಾಜದ ಸ್ಥಾಪಕ ಯೋಗಿ ದಯಾನಂದ ಸರಸ್ವತಿ ಅದು ಹೇಗೋ ಯೋಗದಲ್ಲಿ ಆಸಕ್ತಿ ಕಳೆದುಕೊಂಡರು. ಅವರು ವೇದಗಳಿಗೆ ಎಷ್ಟು ನಿಷ್ಠರಾಗಿದ್ದರೆಂದರೆ, ಬೈಬಲ್, ಕುರಾನ್‌ಗಳಿರಲಿ; ಹಿಂದೂ ಪುರಾಣಗಳನ್ನು, ಶಾಸ್ತ್ರಗಳನ್ನು ಜೊತೆಗೆ ಮೂರ್ತಿಪೂಜೆಯನ್ನು ಮತ್ತು ಬಹುದೇವತಾರಾಧನೆಯನ್ನು ಧಿಕ್ಕರಿಸಿದ್ದರು. ಅವುಗಳೆಲ್ಲವೂ ವೇದಗಳಿಗೆ ವಿರುದ್ಧವಾಗಿವೆ ಎಂದು ಬಲವಾಗಿ ನಂಬಿದ್ದರು. ವೇದಗಳ ಜೊತೆಗೆ ಅವುಗಳಿಗೆ ಸಂಬಂಧ ಕಲ್ಪಿಸುವುದು ಕಷ್ಟವೇ ಹೌದು!

1875ರಲ್ಲಿ ಸ್ಥಾಪನೆಯಾದ ಆರ್ಯಸಮಾಜ ಪಶ್ಚಿಮ ಭಾರತದಲ್ಲಿ ವ್ಯಾಪಕ ನೆಲೆಯನ್ನು ಕಂಡುಕೊಂಡಿತು. ಶುದ್ಧೀಕರಣದ ಮೂಲಕ ಮರುಮತಾಂತರ ಮಾಡಬಹುದೆಂಬ ಪರಿಕಲ್ಪನೆ 'ಘರ್ ವಾಪಸಿ' ಅವರದ್ದೆ. ಆಗಲೇ ಅವರು ಕೆಲವು ಅಸ್ಪೃಶ್ಯರನ್ನು ಮತ್ತು ಮುಸಲ್ಮಾನರನ್ನು ಮರುಮತಾಂತರಿಸಿದ್ದರು. ವೈದಿಕಮೂಲ ಧರ್ಮದ ಶೂದ್ರಾದಿ ಜನರನ್ನು ಅವರು ಹಿಂದೂ ಅನ್ನುವುದಕ್ಕಿಂತಲೂ 'ಆರ್ಯರು' ಎಂದು ಕರೆಯುವುದಕ್ಕೆ ಹೆಚ್ಚು ಇಷ್ಟಪಡುತ್ತಿದ್ದರು. ಮುಂದಿನ ದಿನಗಳಲ್ಲಿ ಆರ್ಯಸಮಾಜವು ಬ್ರಿಟಿಷ್ ಭಾರತದಾದ್ಯಂತ ಗೋರಕ್ಷಣಾ ಸಮಿತಿಗಳನ್ನು ಸ್ಥಾಪಿಸಿತು. 1893ರಲ್ಲಿ ಸಸ್ಯಾಹಾರ ಮತ್ತು ಮಾಂಸಾಹಾರದ ವಿಷಯವಾಗಿಯೆ ಅದು ಎರಡು ಗುಂಪುಗಳಾಗಿ ಒಡೆಯಿತು.

ಗೋವಧೆಯ ವಿರುದ್ಧ ಮೊದಲ ಚಳವಳಿ ನಡೆದದ್ದು ಸಿಖ್ಖರ ರಾಜ್ಯವಾದ ಪಂಜಾಬಿನಲ್ಲಿ. ಆ ರಾಜ್ಯದಲ್ಲಿ ಬ್ರಿಟಿಷರು ಬರುವವರೆಗೆ ಗೋಹತ್ಯೆಯ ಅಪರಾಧಕ್ಕೆ ಮರಣ ದಂಡನೆಯೆ ಶಿಕ್ಷೆಯಾಗಿತ್ತು. ಆಗಲೂ ಗೋರಕ್ಷಣೆಯ ಪರ ಚಳವಳಿ, ಹೋರಾಟಗಳು ಮುಸಲ್ಮಾನರು, ದಲಿತರ ವಿರುದ್ಧವೇ ಆಗಿರುತ್ತಿತ್ತು. ಯಾಕೆಂದರೆ ಬಕ್ರೀದ್ ಹಬ್ಬಕ್ಕೆ ಮುಸಲ್ಮಾನರು ಅಪಾರ ಸಂಖ್ಯೆಯ ಗೋವುಗಳನ್ನು ಕಡಿಯುತ್ತಿದ್ದರು ಮತ್ತು ದಲಿತರು ಅವರಿಗೆ ಗೋವುಗಳನ್ನು ಸರಬರಾಜು ಮಾಡುತ್ತಿದ್ದರು.

1888ರಲ್ಲಿ ಅಲಹಾಬಾದಿನ ಬ್ರಿಟಿಷ್ ನ್ಯಾಯಾಲಯ ಗೋವು ಪವಿತ್ರ ಪ್ರಾಣಿಯಲ್ಲ ಎಂದು ತೀರ್ಪು ನೀಡಿ ಅಚ್ಚರಿ ಮೂಡಿಸಿತು. ಆದರೂ ಆರ್ಯಸಮಾಜದ ಪ್ರಮುಖ ಧ್ಯೇಯ ಗೋರಕ್ಷಣೆಯೆ ಆಗಿ ಮುಂದುವರೆಯಿತು. ಗೋರಕ್ಷಕರ ನೈತಿಕ ಪೊಲೀಸ್‌ಗಿರಿಯನ್ನು (ಜಾಗರೂಕತೆಯ ಸೋಗಿನ ಸಾಹಸಗಳನ್ನು) ಕ್ಷಾತ್ರಗುಣವೆಂದು ಬಣ್ಣಿಸಿ ಅವರ ಮೇಲೆ ಲಾವಣಿಗಳನ್ನು ಕಟ್ಟಿ ಹಾಡುತ್ತಿದ್ದರಂತೆ (ಈಗಲೂ ಸಾಧ್ವೀಮಣಿಯೊಬ್ಬರು ಅಂಥವರನ್ನು ಭಗತ್ ಸಿಂಗ್‌ಗೆ ಹೋಲಿಸಿದ್ದನ್ನು ನೆನಪಿಸಿಕೊಳ್ಳಬಹುದು). 1920ರಲ್ಲಿ ಗೋವಿನ ನೆಪದಲ್ಲಿ ಕೋಮು ಗಲಭೆ ಭುಗಿಲೆದ್ದು ಹಿಂಸಾಚಾರಕ್ಕೆ ತಿರುಗಿದ್ದು ಇತಿಹಾಸ. ಇತ್ತೀಚಿನ ಬೆಳವಣಿಗೆಯಲ್ಲಿ ದಾದ್ರಿ, ಊನಾ, ಮುಜಾಫರ್ ನಗರ, ಸಹರಾನ್ಪುರ ಹೊಸ ವಿಷಯಗಳಾಗುವುದಿಲ್ಲ. ಇಂದಿಗೂ ಗೋವು ಮಿಂಚುಗಂಧಕವಾಗಿರುವುದು (lightening rod) ಸೋಜಿಗವೇನೂ ಅಲ್ಲ. ಆದರೂ ಜಾತಿಮತಭೇದಗಳನ್ನು ತಿರಸ್ಕರಿಸಿ ತಳಸಮುದಾಯ ಮತ್ತು ಆದಿವಾಸಿಗಳನ್ನು ಒಳಗೊಳ್ಳುತ್ತಾ, ವ್ರತಾಚರಣೆಗಳನ್ನು ಸರಳೀಕರಿಸುತ್ತಾ ಹಿಂದೂ ಧರ್ಮಕ್ಕೆ ಸಾತ್ವಿಕ ಚಹರೆಯೊಂದನ್ನು ನಿರ್ಮಿಸಿಕೊಟ್ಟ ಕೀರ್ತಿ ಆರ್ಯಸಮಾಜಕ್ಕೆ ಸಲ್ಲುತ್ತದೆ.

■ ಮೂಚಿ

## ಮಾತೇ ಮುತ್ತು

★ ನಿಮ್ಮನ್ನು ಸಾಮಾನ್ಯ ಎಂದು ತಿಳಿದುಕೊಂಡವರನ್ನು ಯಾವತ್ತೂ ಪ್ರೀತಿಸಬೇಡಿ.
—ಆಸ್ಕರ್ ವೈಲ್ಡ್

★ ಪ್ರೀತಿಸುವವರ ಒಂದು ಸ್ಪರ್ಶ ಸಾಕು, ಪ್ರತಿಯೊಬ್ಬರೂ ಕವಿಯಾಗುತ್ತಾರೆ.
—ಪ್ಲೇಟೋ

★ ನಾನು ಪ್ರೀತಿಗೆ ಅಂಟಿಕೊಳ್ಳಲು ನಿರ್ಧರಿಸಿದ್ದೇನೆ. ದ್ವೇಷದ ಹೊರೆಯನ್ನು ಹೊರುವುದು ಸಾಧ್ಯವಿಲ್ಲ.
—ಮಾರ್ಟಿನ್ ಲೂಥರ್ ಕಿಂಗ್ ಜೂ.

★ ಹೃದಯ ಇರುವುದೇ ಭಗ್ನಗೊಳ್ಳಲು!
—ಆಸ್ಕರ್ ವೈಲ್ಡ್

★ ಜೀವನ ಸುದೀರ್ಘ ಅನ್ನಿಸಿಕೊಳ್ಳುವುದಕ್ಕಿಂತ ಶ್ರೇಷ್ಠ ಅನ್ನಿಸಿಕೊಳ್ಳಬೇಕು.
—ಬಾಬಾಸಾಹೇಬ ಅಂಬೇಡ್ಕರ್

★ ಬೆಳಕು ಕೊಡಿ, ಜನರು ಅವರ ದಾರಿಯನ್ನು ಅವರೇ ಹುಡುಕಿಕೊಳ್ಳುತ್ತಾರೆ.
—ಎಲ್ಲಾ ಬೇಕರ್

★ ಸೂರ್ಯನ ಬೆಳಕು ಇದ್ದಾಗ ನಾನು ಏನೆಲ್ಲವನ್ನೂ ಮಾಡಬಲ್ಲೆ. ಯಾವ ಪರ್ವತವೂ ನನಗೆ ಎತ್ತರವಲ್ಲ.
—ವಿಲ್ಮಾ ರುಡೋಲ್ಫ್

★ ಇವತ್ತು ಏನು ಮಾಡುತ್ತೀಯೋ ಅದರ ಮೇಲೆ ನಿನ್ನ ನಾಳೆಯ ಭವಿಷ್ಯ ನಿಂತಿದೆ.
—ಮಹಾತ್ಮ ಗಾಂಧಿ

★ ಹಕ್ಕಿಯೊಂದು ತನ್ನ ಸ್ವಂತ ಬದುಕಿನಿಂದಲೇ ಶಕ್ತಿ ಮತ್ತು ಸಾಧಿಸುವ ಛಲವನ್ನು ಪಡೆಯುತ್ತದೆ.
—ಎ.ಪಿ.ಜೆ.ಕಲಾಂ

★ ಯಾರು ಸಂತೋಷವಾಗಿರುತ್ತಾರೋ ಅವರು ಉಳಿದವರನ್ನೂ ಸಂತೋಷಗೊಳಿಸಬಲ್ಲರು.
—ಆ್ಯನ್ ಫ್ರಾಂಕ್

★ ನಿಮಗೆ ಯಾವ ಕೆಲಸ ಅಸಾಧ್ಯ ಎನ್ನಿಸುತ್ತದೋ ಅದನ್ನೇ ಮಾಡಿ.
—ಎಲಿನಾರ್ ರೂಸ್‌ವೆಲ್ಟ್